# ಅಧ್ಯಾಯ 1

ಶ್ರೀ ಗಣೇಶಾಯ ನಮಃ ಸದ್ಗುರು ಸಿದ್ಧಾರೂಢ ನಮಃ



ಹೇ ಸಿದ್ಧಾರೂಢ ಸದ್ಗುರುವೇ ನಿನಗೆ ಜಯ ಜಯಕಾರವಿರಲಿ. ಗಣೇಶ, ಶಾರದಾ ರೂಪಗಳಿಂದ ನೀನೇ ನಟಿಸುತ್ತಿರುವಿ. ನೀನು ಅನಾದಿ ಮತ್ತು ಅನಂತವಾಗಿರುವಿ. ಅಂಥಾತನಾದ ನಿನ್ನ ಕೃಪೆಯಿಂದಲೇ ಈ ಗ್ರಂಥವು ನಿರ್ವಿಘ್ನವಾಗಿ ನಡೆಯತಕ್ಕದ್ದಾಗಿರುತ್ತದೆ. ನೀನು ಜ್ಞಾನದೇವನ ಅವತಾರವನ್ನು ಧಾರಣ ಮಾಡಿದಾಗ ನಿನ್ನ ಕೃಪೆಯಿಂದಲೇ ಕೋಣನ್ನು ವೇದವನ್ನು ಉಚ್ಚರಿಸುವಂಥಾದ್ದಾಯಿತು; ಅದೇ ಪ್ರಕಾರವಾಗಿ ಈ ಅಗಾಧವಾದ ನಿನ್ನ ಚರಿತ್ರೆಯನ್ನು ನೀನು ನನ್ನ ಕೈಯಿಂದ ರಚಿಸುತ್ತಿರುವಿ. ಯಾವ ನಿನ್ನ ಕೃಪೆಯಿಂದ ಮೂಕನು ಮಾತಾಡುವನೋ, ಕುಂಟನು ಪರ್ವತವನ್ನು ಏರಿಹೋಗುವನೋ ಮತ್ತು ಕುರುಡನು ಜಗದ್ವೈಚಿತ್ರ್ಯವನ್ನು ನೋಡುವಂಥವನಾಗುವನೋ ಅಂಥಾ ಅಪಾರ ಮಹಿಮೆಯುಳ್ಳಂಥ ನೀನು ನನ್ನ ಮತಿಯನ್ನು ಪ್ರೇರಿಸುವಂಥವನಾಗು. ಸದಾಕಾಲದಲ್ಲಿಯೂ ಚಿತ್ಸ್ವರೂಪದಲ್ಲಿ ಇದ್ದುಕೊಂಡು ಅನಂತ ರೂಪಗಳಿಂದ ನಟಿಸುವಂಥಾ ನೀನು ಲೀಲಾಮಾತ್ರದಿಂದ ನಿನ್ನ ಹಸ್ತದಲ್ಲಿ

ಗೊಂಬೆಗಳಂತಿರುವಂಥಾ ನಮ್ಮನ್ನು ಕುಣಿದಾಡಿಸುವಿ. ನೀನು ಸರ್ವಾಂತರಗಳಲ್ಲಿ ವ್ಯಾಪಿಸಿಕೊಂಡಿದ್ದು, ವಿನೋದಮಾತ್ರದಿಂದ ಆಜ್ಞಾಪಿಸಿದಿ ಅಂದರೆ ಮಹಾಶಿಲೆಗೆ ಸಹಾ ವೈಚಾರಿಕತೆ ಹುಟ್ಟಿ ಉಪನಿಷದಾರ್ಥವನ್ನು ವಿವರಿಸಲಾರಂಭಿಸಿತು. ಕಮಲಾಸನನಾದ ಬ್ರಹ್ಮನ ರೂಪದಿಂದ ನೀನೇ ಜಗತ್ ಕರ್ತನು ವಿಷ್ಣು ರೂಪದಿಂದ ನೀನೇ ವಿಶ್ವವನ್ನು ಪಾಲಿಸುತ್ತಿ ಮತ್ತು ರುದ್ರ ರೂಪದಿಂದ ಸಂಹಾರ ಕರ್ತನೂ ನೀನೇ ಆಗಿರುತ್ತಿ. ನಿನ್ನ ನಾಮವನ್ನು ಪ್ರೇಮದಿಂದ ಗರ್ಜಿಸಿದರೆ, ವಿಘ್ನಗಳು,ದಿಗ್ಭ್ರಮೆ ಹೊಂದಿ ಓಡುತ್ತವೆ; ಮತ್ತು ನಿನ್ನ ಚರಿತ್ರೆಯನ್ನು ವರ್ಣಿಸುವದಕ್ಕೆ ಬಹು ಸಂಭ್ರಮದಿಂದ ಸ್ಫೂರ್ತಿಯು ಉಂಟಾಗುತ್ತದೆ. ಅಂಥಾ ದಯಾಳುವಾದ ಸದ್ಗುರು ಮಾತಾ ಆಗಿರುವ ನೀನು ನನ್ನನ್ನು ಉದ್ಧಾರ ಮಾಡುವ ಉದ್ದೇಶ್ಯದಿಂದ ನಿನ್ನ ಚರಿತ್ರೆಯನ್ನು ವರ್ಣಿಸುವದಕ್ಕೆ ನನಗೆ ಆಜ್ಞೆಯನ್ನು ಕೊಟ್ಟಿರುವಿ ಮತ್ತು ಅಂತರ ಹೃದಯದಲ್ಲಿಯೂ ಒಲಿದಿರುವಿ, ನನ್ನ ಅಂತಃಕರಣ ಚತುಷ್ಟಯಗಳನ್ನು ವ್ಯಾಪಿಸಿಕೊಂಡು ಜಡನಾಗಿರುವ ನನ್ನನ್ನು

ನಿಮಿತ್ತ ಮಾಡಿ ನೀನೇ ನಿನ್ನ ಕಥೆಯನ್ನು ಹೇಳಿಸುತ್ತಿರುವಿ; ಈ ಪ್ರಕಾರವಾಗಿ ತಾಯಿಯಾಗಿರುವ ನೀನು ಆಡಿಸುತ್ತಿ. ಹೀಗಿರುವಂಥಾ ಸಂತರ ಚರಣಗಳನ್ನು ವಂದಿಸುವೆನು. ಯಾವ ಸಂತರ ಕೃಪಾಲೇಶದಿಂದ ಭವಸಾಗರದೊಳಗಿನ ಪ್ರಾಣಿಗಳು ತಾರಣರಾಗುವರೋ ಮತ್ತು ಯಾರ ಸೇವೆಯನ್ನು ಶೂಲಪಾಣಿಯು ಅತ್ಯಾದರದಿಂದ ಸ್ವತಃ ಮಾಡುವನೋ, ಮತ್ತು ಬ್ರಾಹ್ಮಣ, ಮ್ಲೇಂಛ, ಶೂದ್ರ ಎಂಬ ಭೇದವಿಲ್ಲದೆ ಯಾವಾತನ ಮುಖದೊಳಗಿಂದ ಅಹೋರಾತ್ರಿ ನಾಮ ಉಚ್ಚಾರವಾಗುತ್ತದೋ ಮತ್ತು ಇಂಥವನ ಸೇವೆಯನ್ನು ಶ್ರೀಪತಿಯು ತಾನೇ ಮಾಡುವನೋ, ಅಂಥಾ ಸಂತರಚರಣಾರವಿಂದಗಳಿಗೆ ನನ್ನ ನಮಸ್ಕಾರವಿರಲಿ. ಶ್ರೀ ಸಿದ್ಧಾರೂಢರ ಅತ್ಯಂತ ಪ್ರೀತಿಗೆ ಪಾತ್ರರಾಗಿರುವ ಶ್ರೀ ಕಬೀರದಾಸರನ್ನು ನಾನು ವಂದಿಸುವೆನು.

ಹೇ! ಶ್ರೋತ ಜನರುಗಳಿರಾ, ಏಕಾಗ್ರಚಿತ್ತದಿಂದ ಆಲಿಸುವಂಥವರಾಗಿರಿ, ಪೂರ್ವಾರ್ಧ ಚರಿತ್ರೆಯ ಅಂತ್ಯದಲ್ಲಿ ಕಥಿಸಿದ್ದೇನೆಂದರೆ; ಸದ್ಗುರುಗಳು ಹುಬ್ಬಳ್ಳಿಯೊಳಗೆ ತಮ್ಮ

ಸ್ವಾಶ್ರಮದಲ್ಲಿ ಇರುತ್ತಿದ್ದು ಭಕ್ತರನ್ನು ಪಾಲಿಸುತ್ತಿದ್ದರು. ಆ ಚೈತನ್ಯ ಘನರಾದ ಮಹಾರಾಜರು ಎಲ್ಲರ ಅಂತರ್ಯದಲ್ಲಿ ವ್ಯಾಪಿಸುತ್ತಿದ್ದು, ಅನನ್ಯಭಾವದಿಂದ ಯಾರೂ ಭಜಿಸುತ್ತಿರುವರೋ ಅಂಥವರನ್ನು ಭವದೊಳಗಿಂದ ತಾರಿಸಿ ತಮ್ಮ ಸ್ವಪದಕ್ಕೆ ಕರೆದುಕೊಳ್ಳುತ್ತಿದ್ದರು. ಆ ಸದ್ಗುರುನಾಥರು ಸಕಲಕಲಾಮಂಡಿತರಾಗಿಯೂ, ಸರ್ವಶಾಸ್ತ್ರಾರ್ಥ ಮುಖೋದ್ಗತರಾಗಿಯೂ, ಭಕ್ತ ಕಾಮ ಕಲ್ಪದ್ರುಮರೆನ್ನಿಸಿಕೊಳ್ಳುವಂಥವರಾಗಿಯೂ ಶೋಭಿಸುತ್ತಿದ್ದನು. ಪ್ರಾತಃಕಾಲದಲ್ಲಿ ಮತ್ತು ಚತುರ್ಥಪ್ರಹರದಲ್ಲಿ ನಿತ್ಯ ವೇದಾಂತ ಶ್ರವಣ ಅಮೃತವನ್ನು ಭಕ್ತರಿಗೋಸ್ಕರ ಪಾನ ಮಾಡಿಸಿ, ಅವರ ಭವ ಭ್ರಮೆಯನ್ನು ಹಾರಿಸಿ ಬಿಡುವಂತಹ ಸದ್ಗುರುಗಳ ಸ್ಥಾನಕ್ಕೆ ನಾಲ್ಕು ಪ್ರಕಾರದ ಭಕ್ತರು ನಿತ್ಯದಲ್ಲೂ ಬರುತ್ತಿರುವರು. ಸದ್ಗುರುಗಳಾದರೂ ಅವರವರ ಅಧಿಕಾರಕ್ಕನುಸಾರವಾಗಿ ಅವರವರಿಗೆ ಉಪದೇಶಿಸುತ್ತಿರುವರು. ಪ್ರಥಮತಃ ಗೃಹದಾರಾಧಿಗಳಲ್ಲಿ ಚಿತ್ತವುಳ್ಳಂಥಾ ಲೌಕಿಕ ಜನರು ಸದ್ಗುರುಗಳ ಸನ್ನಿಧಿಗೆ ಬಂದು

ದಾರಾ, ಸುತ, ಧನ ಇವೇ ಮುಂತಾದವುಗಳನ್ನು ಸ್ವಸುಖಾರ್ತ ಬೇಡುವರು. ಇಂಥಾ ನಶ್ವರವಾದ ಪದಾರ್ಥಗಳನ್ನು ಇವರು ಬೇಡುತ್ತಾರೆಂದು ತಿಳಿದು, ಅವರ ಮೇಲೆ ದಯೆಯುಳ್ಳಂಥವರಾದ ಸದ್ಗುರುಗಳು ಅವರಿಗೆ ನಾಮಸ್ಮರಣೆಯನ್ನು ಉಪದೇಶ ಮಾಡಿ ಇದರಿಂದ ಕಾಮ ಪೂರ್ತಿಯಾಗುವದೆಂದು ಹೇಳುವರು. ಅವರಾದರೂ ಆಜ್ಞೆ ಪ್ರಕಾರ ನಾಮಸ್ಮರಣೆ ಮಾಡಿ ಸದ್ಗುರು ಕೃಪೆಯಿಂದ ತಮ್ಮ ಮನೋರಥಗಳನ್ನು ಹೊಂದಿ ಅತ್ಯಂತ ಭಕ್ತಿಯುಕ್ತರಾಗಿ ಆತನನ್ನೇ ಭಜಿಸುತ್ತಿರುವರು. ಇದರಿಂದ ಅವರ ಅಂತಃಕರಣನಿರ್ಮಲವಾಗುವದು. ದ್ವಿತೀಯಾಧಿಕಾರಿಗಳು ಭವಸಾಗರದಲ್ಲಿ ಅತ್ಯಂತ ಕಷ್ಟಪಟ್ಟವರಾಗಿ, ಸಂಸಾರದಲ್ಲಿ ಇರುತ್ತಾ ತಮಗೆ ಮೋಕ್ಷವಾಗಬೇಕೆಂದು ಇಚ್ಛೆಸುವರು. ಅಂಥವರು ಸದ್ಗುರು ಚರಣಗಳಿಗೆ ಪ್ರಾಪ್ತರಾಗಿ ಅತ್ಯಂತ ದೈನ್ಯ ಭಾವದಿಂದ ಪ್ರಾರ್ಥಿಸುತ್ತಾರೆ. - "ಹೇ ಪ್ರಭು ರಕ್ಷಿಸು, ರಕ್ಷಿಸು, ಸಂಸಾರದಲ್ಲಿ ಸಿಲುಕಿ ನಾವು ಬಹಳ ಶ್ರಮಪಡುತ್ತವೆ. ಸಂಸಾರವು ಆಸಾರ ಮತ್ತು ದುಃಖಮಯವೆಂಬುದನ್ನು ನಾವು

ಬಲ್ಲೆವು; ಆದರೆ ಆ ಸಂಸಾರವನ್ನು ಬಿಡುವುದು ನಮಗೆ ಶಕ್ಯವಿಲ್ಲ. ಆದ್ದರಿಂದ ತಾವು ಕೃಪೆ ಮಾಡಿ, ಅದರೊಳಗಿರುವಾಗ್ಗೆನೇ ನಮಗೆ ಮೋಕ್ಷ ಸುಖವನ್ನು ದಯಪಾಲಿಸಬೇಕು". ಈ ಪ್ರಕಾರ ವಚನವನ್ನು ಸದ್ಗುರುವು ಕೇಳಿ ಅಂತಃಕರಣದಲ್ಲಿ ದಯಾಭರಿತನಾಗಿ ಅವರಿಗೆ ಶಾಸ್ತ್ರ ಶ್ರವಣ ಮತ್ತು ನಾಮಜಪ ಈ ಉಪಾಯಗಳನ್ನು ಹೇಳುವನು. ಈ ರೀತಿಯಲ್ಲಿ ಅವರು ದೃಢಭಾವದಿಂದ ನುಡಿಯುತ್ತಾ ಚಿತ್ತದಲ್ಲಿ ಮಲರಹಿತರಾಗಿಯೂ ಶಾಸ್ತ್ರ ಶ್ರವಣ ಮತ್ತು ಭಜನೆಯಲ್ಲಿ ಬಹು ಪ್ರೇಮಳರಾಗಿಯೂ, ಸಹಜವಾಗಿ ಸಂಸಾರಕ್ಕೆ ಪ್ರತ್ಯೇಕರಾಗುವರು. ಪ್ರಪಂಚದಲ್ಲಿ ತೊಡಕು ಪರಮಾರ್ಥದಲ್ಲಿ ರತಿ, ಹೀಗೆ ಚಿತ್ತದಲ್ಲಿ ದ್ವಿಭಾಗ ಹೊಂದಿದಂಥವರಾಗಿ, ಕೆಲವು ಕಾಲ ಬಹಳ ತಳಮಳಿಸುತ್ತ ಕಟ್ಟಕಡೆಗೆ ಸಂಸಾರವನ್ನು ಬಿಟ್ಟು ಬಿಡುವರು. ಅಲ್ಲಿಂದ ಮೂರನೇ ಅಧಿಕಾರಿಗಳು ಸಂಸಾರ ಕಾರ್ಯಗಳನ್ನು ಪೂರ್ಣವಾಗಿತ್ಯಜಿಸಿ, ಗುರು ಗೃಹದಲ್ಲಿ ವಾಸಮಾಡುವಂಥವರಾಗಿ, ಅತ್ಯಾದರದಿಂದ ಮತ್ತು ನಿಷ್ಕಾಮ

ಬುದ್ಧಿಯಿಂದ ಗುರುಸೇವಾ ಮಾಡುತ್ತಿರುವವರು. ಅವರು ನಿತ್ಯದಲ್ಲಿ ಗುರು ಆಜ್ಞಾನುಸಾರವಾಗಿ, ಭಿಕ್ಷಾಟನಕ್ಕೆ ಹೋಗಿ, ಭಿಕ್ಷೆಯನ್ನು ತಕ್ಕೊಂಡು ಬಂದು, ಗುರುವಿಗೆ ಸಮರ್ಪಿಸಿ, ಆತನು ಕೊಟ್ಟಷ್ಟು ಸೇವಿಸಿ, ಅತಿ ಪ್ರೇಮದಿಂದ ಸಿದ್ದರ ಚರಣಗಳಲ್ಲಿಯೇ ಇರುವವರು. ನಿತ್ಯದಲ್ಲಿಯೂ ಬಹು ಆದರಯುಕ್ತರಾಗಿ, ಜ್ಞಾನಸಾಗರನಾದ ಆ ಸದ್ಗುರುವಿನ ಮುಖದಿಂದ ಸ್ರವಿಸುವ ವೇದಾಂತ ಭಾಷಣವೆಂಬ ಅಮೃತಧಾರೆಯನ್ನು ಶ್ರವಣದ್ವಾರದಿಂದ ಸೇವಿಸುತ್ತಿರುವವರು. ಶ್ರವಣವಾದ ಬಳಿಕ ಪರಸ್ಪರರೊಳಗೆ ಅದೇ ಚರ್ಚೆಯನ್ನು ಮಾಡುವರು. ಅನಂತರ ಏಕಾಂತದಲ್ಲಿ ಆಸೀನರಾಗಿ ದೃಢ ಭಾವದಿಂದ ಅದನ್ನೇ ಮನನ ಮಡುವರು. ಈ ಪ್ರಕಾರ ಅನುದಿನ ಗುರುಸ್ಥಾನದಲ್ಲಿ ಶ್ರವಣ ಮನನಾದಿಗಳು ನಡಿಯುವದರಿಂದ ಅವರ ಚಿತ್ತದೊಳಗಿನ ವಿಷಯಾಸಕ್ತಿಯು ಗುರುಕೃಪೆಯಿಂದ ನಿಃಶೇಷವಾಗಿ ಹೋಗುವುದು. ಆ ಮೇಲೆ ಕ್ವಚಿತ್ತಾಗಿರುವ ಉತ್ತಮಾಧಿಕಾರಿಯು ದೀರ್ಘಕಾಲ ಮಾಡಿದ ಮನನ ಅಭ್ಯಾಸ ಬಲದಿಂದ ಅತ್ಯಂತ ನಿರ್ಮಲ ಚಿತ್ತವುಳ್ಳವನಾಗಿ

ಸೋಽಹಂಭಾವವನ್ನು ಹೊಂದುವಂಥವನಾಗುತ್ತಾನೆ.

ಅಂಥವನಿಗೆ ಸದ್ಗುರುವು ಅಂತರಂಗದಲ್ಲಿ ಕರೆದುಕೊಂಡು

ಬ್ರಹ್ಮಾತ್ಮೈಕ್ಯ ಬೋಧವನ್ನು ಮಾಡಿಸಿಕೊಡುವಂಥಾ

ಗಹನವಾದ ಮಹಾವಾಕ್ಯವನ್ನು ಉಪದೇಶಿಸುವನು. ಅದರಿಂದ

ಆತನಿಗೆ ದ್ವೈತ ಅದ್ವೈತವೆಂಬ ಭಾವಗಳೆರಡೂ ಶೂನ್ಯವಾಗಿ,

ಎಲ್ಲಾ ವೃತ್ತಿಗಳು ಶಾಂತವಾಗಿ, ಅಖಂಡವಾಗಿ ಆತನು

ಏಕಭಾವದಲ್ಲಿದ್ದು ಆನಂದವನ್ನು ಅನುಭವಿಸುತ್ತಾನೆ. ಆತನ

ಮೇಲೆ ಸದ್ಗುರುವಿನ ಪೂರ್ಣ ಕೃಪೆಯಾಗಿ ಆತನು

ಸರ್ವಾಧಿಷ್ಠಾನವಾಗಿ, ಈಶ್ವರನಿಗಿಂತಲೂ ಮೇಲಿನ

ಸ್ಥಾನವಾದ ಬ್ರಹ್ಮದಲ್ಲಿ ಏಕರೂಪನಾಗಿ ಹೋಗುತ್ತಾನೆ. ಇಂಥಾ

ಮಹತ್ತಾದ ಪದವನ್ನು ಆತನು ಹೊಂದಿದರೂ ನಿತ್ಯದಲ್ಲೂ

ಸದ್ಗುರು ಸೇವಾಕಾರ್ಯಗಳನ್ನು ಅತಿ ಪ್ರೇಮದಿಂದ ಮಾಡುತ್ತ

ಎಲ್ಲರ ಕೂಡ ವಿನಯದಿಂದಲೂ

ದಯಾಭಾವಯುಕ್ತನಾಗಿಯೂ ವರ್ತಿಸುವನು. ಈ ಪ್ರಕಾರ

ಚತುರ್ವಿಧ ಅಧಿಕಾರಿಗಳು ಸಿದ್ಧರ ಸನ್ನಿಧಿಯಲ್ಲಿ

ಪ್ರಾಪ್ತರಾಗುವರು. ಅವರವರ ಅಧಿಕಾರವನ್ನು ಪರೀಕ್ಷಿಸಿ ಸಿದ್ಧ

ಸದ್ಗುರುಗಳು ಅವರವರಿಗೆ ಯುಕ್ತವಾದ ಬೋಧ ಮಾಡುವರು. ದೂರ ದೂರ ಪ್ರಾಂತಗಳಿಂದ ಅನೇಕ ಜನ ಭಕ್ತರು ಬರುವರು, ಮತ್ತು ಸಿದ್ಧ ಕೃಪೆಯಿಂದ ತಮ್ಮ ಮನೋ ರಥಗಳನ್ನು ಪ್ರಾಪ್ತಿ ಮಾಡಿಕೊಂಡು ಹೋಗುವರು. ಈ ಸಮಯದಲ್ಲಿ ಸಿದ್ಧ ಸದ್ಗುರುವು ಸಿದ್ಧಾಶ್ರಮದಲ್ಲಿಯೇ ಇರುವಂತೆ ಕಾಣಿಸುತ್ತಿದ್ದರೂ, ಆತನು ದೇಶಾಂತರಗಳಲ್ಲಿರುವ ಭಕ್ತ ಜನರಿಗೆ ಕಾಣಿಸಿಕೊಂಡು ಅವರ ಸಂಕಷ್ಟಗಳನ್ನು ಪರಿಹರಿಸುವರು. ಅವರ ತಾಪಗಳನ್ನು ಶಾಂತಿಪಡಿಸಿ, ಅವರಿಂದ ಪೂಜಾದಿಗಳನ್ನು ಕೈಕೊಂಡು, ಅವರಿಗೆ ಆಮರಣ ಭಕ್ತಿ ಮಾರ್ಗಕ್ಕೆ ಹಚ್ಚಿ ಆ ಕರುಣಾ ಘನನಾದ ಸದ್ಗುರುವು ಅವರನ್ನು ಉದ್ಧರಿಸುವನು. ಆ ಸಮಯದಲ್ಲಿ ಸಿದ್ಧಾರೂಢರು ತೋರಿಸಿದಂಥಾ ಅನೇಕ ಚಮತ್ಕಾರಗಳು ಎಲ್ಲಾ ಭಕ್ತರಿಗೆ ವಿದಿತವಾಗಿರುತ್ತವೆ. ಅವುಗಳನ್ನೆಲ್ಲಾ ಈ ಗ್ರಂಥದಲ್ಲಿ ಬರೆಯಬೇಕಾಗಿ ಸದ್ಗುರುರಾಯನ ಆಜ್ಞೆಯಾದ ಮೇರೆಗೆ ಗ್ರಂಥವನ್ನು ಆರಂಭಿಸುತ್ತೇನೆ. ಯಾವಾತನು ಈ ಗ್ರಂಥವನ್ನು ಪಠಿಸುವನೋ ಆತನ ಪಾಪವೆಲ್ಲಾ ನಷ್ಟವಾಗಿ ಬ್ರಹ್ಮಾನಂದದಲ್ಲಿ ತಲ್ಲೀನನಾಗುವನೆಂದು ಸದ್ಗುರುವು ಈ

ಗ್ರಂಥಕ್ಕೆ ವರದಾನವನ್ನು ಕೊಟ್ಟಿರುತ್ತಾನೆ. ಅನಧಿಕಾರಿ ಮತ್ತು ಅಧಿಕಾರಿ ಈ ಉಭಯತರಿಗೂ ಆಹ್ಲಾದಕರವಾಗಿರುವ ಈ ಗ್ರಂಥವನ್ನು ಸದ್ಗುರುವು ತಾನೇ ಬರಿಸುತ್ತಾನೆ. ಲೇಖಕನ ಕೈಯಲ್ಲಿ ಲೇಖಣಿಯಾವ ಪ್ರಕಾರವಿರುವುದೋ, ಅದೇ ಪ್ರಕಾರ ಈ ಗ್ರಂಥ ಲೇಖನ ಕಾಲದಲ್ಲಿ ಸದ್ಗುರುಗಳ ಕೈಯಲ್ಲಿಯ ಲೇಖಣಿಯಂತೆ ನಾನು ಇರುವೆನು. ಸದ್ಗುರುರಾಯನೇ ತನುಮನಗಳಲ್ಲಿ ವ್ಯಾಪಿಸಿದ್ದು ತನ್ನ ಚರಿತ್ರೆಯನ್ನು ತಾನೇ ಬರೆಯುತ್ತಾನೆ. ಇದರೊಳಗೆ ಯಾವ ಯಾವ ಶುದ್ಧ ಭಾವಗಳಿರುವವೋ ಅವೆಲ್ಲಾ ಆತನವು ಎಂದು ತಿಳಿಯತಕ್ಕದ್ದು ಮತ್ತು ಇದರಲ್ಲಿ ಕಾಣಿಸುವ ಅಶುದ್ಧ ಭಾವಗಳು ಜಡನಾದ ನನ್ನವುಗಳೆಂದು ಕ್ಷಮಿಸತಕ್ಕದ್ದು. ಈ ಸಮಯದಲ್ಲಿ ಶ್ರೋತಾ ಜನರು ಅನುತ್ತಾರೆ. ಎಲೇ ಭಕ್ತನೇ ಶ್ರೀ ಸಿದ್ಧಾರೂಢ ಪೂರ್ವಾರ್ಧ ಚರಿತ್ರೆಯನ್ನು ನಮಗೆ ಸವಿಸ್ತಾರವಾಗಿ ನಿರೂಪಿಸಿ ಆ ಮೇಲೆ ಉತ್ತರಾರ್ಧವನ್ನು ಆರಂಭ ಮಾಡುವಂಥವನಾಗು. ಆ ಪೂರ್ವಾರ್ಧ ಚರಿತ್ರೆಯನ್ನು ಇಲ್ಲಿ ಕೇಳಲಿಚ್ಛಿಸುತ್ತೇವೆ ಅಂದರು. ಆದ್ದರಿಂದ ಮುಂದಿನ ಹನ್ನೆರಡು ಅಧ್ಯಾಯಗಳಲ್ಲಿ,

ಹೇ ಶ್ರೋತಾ ಜನರುಗಳಿರಾ, ನಿಮಗೋಸ್ಕರ ಪೂರ್ವಾರ್ಧ ಚರಿತ್ರೆಯನ್ನು ನಿರೂಪಿಸುವನು, ಏಕಾಗ್ರಚಿತ್ತದಿಂದ ಕೇಳುವಂಥವರಾಗಿರಿ, ಎಂಬಲ್ಲಿಗೆ ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣ ಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮ ಮಾಡುವಂಥ ಬಹು ಮಧುರವಾದ ಈ ಪ್ರಥಮಾಧ್ಯಾಯವನ್ನು ಶಿವದಾಸನು ಶ್ರೀ ಸಿದ್ಧಾರೂಢ ಚರಣಾರವಿಂದಗಳಿಗೆ ಅರ್ಪಿಸಿರುವನು.